ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ಮತ್ತು ಇ) ದಿನಾಂಕ ೬.೧೨.೧೯೮೬ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಫಿಟ್ಟಿಂಗಗಳನ್ನು ಕೊಟ್ಟಿದೆ. ಕೆಲಸ ನಡೆಯುತ್ತಿದೆ.

ಶ್ರೀ ಜೆ. ಹೆಚ್. ಪಟೇಲ್.— ನಮ್ಮ ಪ್ರಶ್ನೋತ್ತರದಲ್ಲಿ ಮೂರನೆಯ ಪ್ರಶ್ನೆಗೆ ಉತ್ತರ ಇಲ್ಲದೇ ಇರುವುದರಿಂದ ನಾನು ಇದನ್ನು ಹೇಳುತ್ತೇನೆ. ಮೂರನೆಯ ಪ್ರಶ್ನೆಗೆ ಉತ್ತರ "ನಿಜವಲ್ಲ"

ಶ್ರೀ ಬಿ. ಧರ್ಮಪ್ಪ.— ಚಂದ್ರಾಬಡಾವಣೆಗೆ ದಾರಿ ದೀಪಗಳನ್ನು ಒದಗಿಸಿಕೊಡುವ ಬಗ್ಗೆ ಸುಮಾರು ವರ್ಷಗಳಿಂದಲೂ ಕೇಳಿದರೂ ಇದುವರೆಗೂ ಆಗಿಲ್ಲ. ಇದರ ಬಗ್ಗೆ ಸರಿಯಾಗಿ ಮಂನಸ್ಸು ಮಾಡಿದರೆ ಮೂರುವಾರದಲ್ಲಿ ಮುಗಿಸಬಹುದು. ಇದನ್ನು ಏತಕ್ಕೆ ಮಾಡಲಿಲ್ಲ ? ಅಲ್ಲಿಯ ಜನರಿಗೆ ಬಹಳ ಕಷ್ಟವಾಗಿದೆ.

ಶ್ರೀ ಜೆ. ಹೆಚ್. ಪಟೇಲ್.— ಚಂದ್ರಾ ಬಡಾವಣೆ ಎಲ್ಲಿದೆ ಎಂದು ಮಾನ್ಯ ಸದಸ್ಯರು ತಿಳಿಸುತ್ತೀರಾ ? ಮಾನ್ಯ ಸದಸ್ಯರಿಗೆ ಚಂದ್ರಾ ಬಡಾವಣೆ ಎಲ್ಲಿದೆ ಎಂದು ಗೊತ್ತಿದ್ದರೆ ಉತ್ತರ ಹೇಳಬಹುದು. ಆ ಬಡಾವಣೆಯಲ್ಲಿ ಮನೆಗಳು ಇಲ್ಲ, ಅಲ್ಲಿ ಅನ್‌ಅಥರೈಸ್ಡ್ ಆಗಿ ಕಟ್ಟಿರತಕ್ಕ ಗುಡಿಸಲುಗಳು ಮಾತ್ರ ಇವೆ. ಈ ಕೆಲಸ ಏತಕ್ಕೆ ಆಗಿಲ್ಲ ಎನ್ನುವುದನ್ನು ಕೇಳುವುದಕ್ಕೆ ಮೊದಲು ಚಂದ್ರಾ ಬಡಾವಣೆಗೆ ಹೋಗಿ ನೋಡಿಕೊಂಡು ಬರಬೇಕು.

ಶ್ರೀ ಬಿ. ಧರ್ಮಪ್ಪ.— ದಿನಾಂಕ ೫-೧೨-೧೯೮೬ರಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ಎಲ್ಲೆಲ್ಲಿ ದೀಪ ಇಲ್ಲ, ಅಲ್ಲಿ ದರೋಡೆಗಳು ಜಾಸ್ತಿಯಾಗಿ ನಡೆಯುತ್ತವೆ ಎಂದು ಬಂದಿದೆ. ಇದು ದರೋಡೆಕಾರರ ಗಮನಕ್ಕೂ ಬಂದಿದೆ. ಆದ್ದರಿಂದ ಮಾನ್ಯ ಸಚಿವರು ಗೃಹಸಚಿವರಿಗೆ ತಿಳಿಸುವುದರ ಜೊತೆಗೆ ಆದಷ್ಟು ಜಾಗ್ರತೆ ದಾರಿ ದೀಪಗಳನ್ನು ಒದಗಿಸಿ ಕೊಡುವ ವ್ಯವಸ್ಥೆಯನ್ನು ಮಾಡಿಕೊಡಬೇಕು.

ಶ್ರೀ ಜೆ. ಹೆಚ್. ಪಟೇಲ್.— ಆಯಿತು, ದರೋಡೆ ಆಗದಂತೆ ನೋಡಿಕೊಳ್ಳೋಣ.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಬಗೆಗೆ

೫೯೯. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).— ಮಾನ್ಯ ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದವರು ಭದ್ರಾವತಿ ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆಗೆ ಒದಗಿಸಿರುವ ಬಂಡವಾಳ ವೆಷ್ಟು ?

ಆ) ೧೯೮೫-೮೬, ೮೬-೮೭ನೇ ಸಾಲಿನಲ್ಲಿ ಕಾರ್ಖಾನೆ ಗಳಿಸಿರುವ ಲಾಭವೆಷ್ಟು ? ನಷ್ಟವೆಷ್ಟು ?

ಇ) ಭದ್ರಾವತಿ ಕಾರ್ಖಾನೆಯಲ್ಲಿ ಆಡಳಿತವರ್ಗದಿಂದ ಭ್ರಷ್ಟಾಚಾರ ನಡೆಯುತ್ತಿದ್ದು ಅದರಿಂದ ನಷ್ಟವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಅದರ ಆಡಳಿತವನ್ನು ಉತ್ತಮಗೊಳಿಸಲು ಹಾಗೂ ಲಾಭಬರುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮಂತ್ರಿ ವಿದ್ಯುಚ್ಛಕ್ತಿ ಸಚಿವರು).—

ಅ) ೨೭೮೪ ಲಕ್ಷ ರೂ.ಗಳು.

ಆ) ೧೯೮೫-೮೬ ರಲ್ಲಿ ೩೨೪೦.೭೯ ಲಕ್ಷ ರೂ.ಗಳು ನಷ್ಟ. ೧೯೮೬-೮೭ನೇ ವರ್ಷವು ೩೧-೩-೮೭ ರಂದು ಕೊನೆಗೊಳ್ಳಲಿರುವುದರಿಂದ ಈ ಸಾಲಿನ ಲಾಭ ನಷ್ಟವು ಇನ್ನು ತಿಳಿದುಬಂದಿಲ್ಲ.

ಕಂಪೆನಿಯು ಅನುಭವಿಸುತ್ತಿರುವ ನಷ್ಟಕ್ಕೆ ಭಾರಿ ವೊತ್ತದ ಹಣದ ದುರುಪಯೋಗವು ಕಾರಣವಾಗಿದೆಯೆಂನ್ನುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕೇಸುಗಳು ಸರ್ಕಾರಕ್ಕೆ ವರದಿಯಾಗಿಲ್ಲ.

ಪ್ರಶ್ನೆ (ಇ) ಗೆ ನೀಡಿರುವ ಉತ್ತರದಿಂದ ಆಡಳಿತವನ್ನು ಉತ್ತಮಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಲಾಭಬರುವಂತೆ ಮಾಡಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ವಿಂತವ್ಯಯವನ್ನು ಸಾಧಿಸಲು ವಿವಿಧ ಇಲಾಖೆಗಳ ಕಾರ್ಯಾಚರಣೆಯನ್ನು ಸತತವಾಗಿ ಪರಿಶೀಲಿಸಲಾಗುತ್ತಿದೆ.

೨) ಉತ್ಪಾದನಾ ವೆಚ್ಚವನ್ನು ತಗ್ಗಿಸಲು ಉತ್ಪನ್ನ ವೈವಿಧ್ಯತೆಯ ಯೋಜನೆಗಳಂ ಉತ್ಪಾದನಾ ತಾಂತ್ರಿಕತೆಯಲ್ಲಿ ಬದಲಾವಣೆ. ಅಗ್ಗದ ಕಚ್ಚಾವಸ್ತುಗಳನ್ನು ಉಪಯೋಗಿಸುವ ಸಲುವಾಗಿ ಪರಿಷ್ಕರಣ ವಿಧಾನದಲ್ಲಿ ಬದಲಾವಣೆ ಇತ್ಯಾದಿ ವಿಧಾನಗಳು ಪರಿಶೀಲನೆಯಲ್ಲಿವೆ.

೩) ವಿದ್ಯುಚ್ಛಕ್ತಿಯ ಬಳಕೆ ಹಾಗೂ ಸರಕು ನಿಯಂತ್ರಣದಲ್ಲಿ ಗರಿಷ್ಠ ವಿಂತವ್ಯಯವನ್ನು ಸಾಧಿಸಲು ಕ್ರಮ ಕೈಗೊಳ್ಳಲಾಗಿದೆ.

೪) ಉತ್ತಮ ಕಾರ್ಯಸಾಧನೆಗಾಗಿ ವಿವಿಧ ವಿದ್ಯುಚ್ಛಕ್ತಿ ಉಳಿತಾಯ ಕ್ರಮಗಳನ್ನು ಚರ್ಚಿಸಿ ಅನುಷ್ಠಾನಕ್ಕೆ ತಂದು ಸತತವಾಗಿ ಪರಿಶೀಲಿಸಲು ಇಲಾಖೆ ಮಟ್ಟದಲ್ಲಿ ಸಮಿತಿಗಳನ್ನು ರಚಿಸಲಾಗಿದೆ.

೫) ಸ್ವಯಂ ನಿವೃತ್ತಿ ಯೋಜನೆಯೊಂದನ್ನು ಜಾರಿಗೆ ತರಲಾಗಿದೆ. ಎಲ್ಲಾ ನೇಮಕಾತಿಯ ಮೇರೆಗೆ ನಿರ್ಬಂಧ ಹೇರಲಾಗಿದೆ.

೬) ಇತರ ಕೆಲಸಗಳ ನಿರ್ವಹಣೆಗೆ ಕಾಂಟ್ರಾಕ್ಟ್ ನೀಡುವುದನ್ನು ಕಡಿಮೆ ಮಾಡಲಾಗಿದೆ.

ಶ್ರೀ ಆರ್. ವೆಂಕಟರಾವಯ್ಯ.—ಸ್ವಾಮಿ, ಇದು ನಿಜವಾಗಿಯೂ ಪ್ರಿಸ್ಟೀಜಿಯಸ್ ಇಂಡಸಿ ಇಲ್ಲಿ ಉತ್ಪಾದನೆಯಾದ ಕಬ್ಬಿಣವನ್ನು ಸರ್ಕಾರೀ ಕಟ್ಟಡಗಳಿಗೆ ಮತ್ತು ಸರ್ಕಾರೀ ಸ್ವಾಮ್ಯದಲ್ಲಿರತಕ್ಕ ಸಂಸ್ಥೆಗಳ ಕಟ್ಟಡಗಳಿಗೆ ಉಪಯೋಗಿಸಲೇ ಬೇಕೆಂದು ತಾವು ಕಡ್ಡಾಯ ಮಾಡಬೇಕು. ಇದನ್ನು ನೀವು ಮಾಡುತ್ತೀರಾ ? ಇನ್ನು ವಿದ್ಯುಚ್ಛಕ್ತಿಯ ಕೊರತೆ ಇದ್ದುದರಿಂದಾಗಿ ಈ ರೀತಿ ನಷ್ಟವಾಗುವುದಕ್ಕೆ ಕಾರಣವಾಯಿತೆಂದು ಹೇಳುತ್ತಿದ್ದೀರಿ. ಆದ್ದರಿಂದ ಈ ಕಾರ್ಖಾನೆಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳಲು ಸ್ವಂತ ವಿದ್ಯುತ್ ಘಟಕವನ್ನು ಸ್ಥಾಪಿಸಿಕೊಳ್ಳಲು ಏನಾದರೂ ಕ್ರಮ ಕೈಗೊಳ್ಳುತ್ತೀರಾ ? ಈ ಕಾರ್ಖಾನೆಯನ್ನು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾಕ್ಕೆ ಕೊಡಬೇಕೆಂದು ಹೇಳುತ್ತಿರುವುದು ಕೇಳಿದ್ದೇವೆ. ಆದಕ್ಕೆ ಕೊಡುವುದಾದರೆ ಆ ವಿಚಾರ ಯಾವ ಹಂತದಲ್ಲಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಈ ಕಾರ್ಖಾನೆಗೆ ಬೇಕಾದಷ್ಟು ವಿದ್ಯುಚ್ಛಕ್ತಿಯನ್ನು ಪೂರ್ತಿಯಾಗಿ ಕೊಡುವುದಕ್ಕೆ ಸಾಧ್ಯವಿಲ್ಲ. ಇನ್ನು ಈ ಕಾರ್ಖಾನೆಯನ್ನು ಸ್ಟೀಲ್ ಅಥಾರಿಟಿ ಆಫ್ ಇಂಡಿಯದವರು ಏನಾದರು ತೆಗೆದುಕೊಂಡರೆ ಈ ಒಂದು ತೊಂದರೆಯಿಂದ ಮುಂಕ್ತವಾಗಬಹುದೆಂದು ನನ್ನ ಭಾವನೆ.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೆ, ಅಲ್ಲಿ ಕೆಳಗಿನ ಜನ ಅಧಿಕಾರಿಗಳಿದ್ದಾರೆ ಎಂದು ಕೇಳಿದ್ದೇವೆ. ಈ ಅಧಿಕಾರಿವರ್ಗವೇ ಜಾಸ್ತಿಯಾಗಿರುವುದರಿಂದ ಇಷ್ಟು ನಷ್ಟವಾಗಿರಬಹುದು. ಆದ್ದರಿಂದ ಈ ಅಧಿಕಾರಿಗಳ ಸಂಖ್ಯೆಯನ್ನು ಕಂಟ್ರೋಲ್ ಮಾಡಿ ಆಗುತ್ತಿರುವ ನಷ್ಟವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಳ್ಳುವಂತೆ ನಾವು ಅವರಿಗೆ ಹೇಳುತ್ತಿದ್ದೇವೆ. ಅದು ಆದರೆ ಸ್ವಲ್ಪಮಟ್ಟಿಗೆ ಇದು ಸುಧಾರಣೆ ಆಗಬಹುದು.

ಅಧ್ಯೆಕ್ಷರು.—ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ಆದರೂ ಕೂಡ ಸದಸ್ಯರಿಗೋಸ್ಕರ ಇನ್ನೂ ಸ್ವಲ್ಪ ಕಾಲಾವಕಾಶವನ್ನು ವಿಸ್ತರಣೆ ಮಾಡುತ್ತಿದ್ದೇನೆ.